1. 1969ರ ಕೇಂದ್ರೀಯ ಜನನಗಳ ಮತ್ತು ಮರಣಗಳ ನೋಂದಣಿ ಅಧಿನಿಯಮದ ಕಲಂ 30ರ 1999ರ ರೀತ್ಯಾ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ರಚಿಸಿ **ದಿನಾಂಕ 30.12.1999**ರಂದು ಹೊರಡಿಸಲಾದ **ಪಿಡಿಎಸ್/208/ಎಸ್ಎಂಸಿ/1999**ನೇ ಸಂಖ್ಯೆಯ ಅಧಿಸೂಚನೆ.

2. 199ರ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳಿಗೆ ತಿದ್ದುಪಡಿ ಹಾಗೂ ನಮೂನೆ–1 2,5,6.7 ಹಾಗೂ 8ಗಳನ್ನು ಬದಲಾಯಿಸಿ **ದಿನಾಂಕ 30.12.2006**ರಂದು ಹೊರಡಿಸಲಾದ **ಪಿಡಿಎಸ್/135/ಎಸ್ಎಂಸಿ/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III. ಶ್ರೀ ಕೆ.ಎಸ್. ಈಶ್ವರಪ್ಪ, (ಇಂಧನ) ಸಚಿವರು: ಮಾನ್ಯ ಅಧ್ಯಕ್ಷರೆ,

1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮದ ಕಲಂ 57(3) ಮೇರೆಗೆ:

1. 1999ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ) ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಹಾಗೂ ಹೊಸ ನಮೂನೆಯನ್ನು ನಿಗದಿಪಡಿಸಿ **ದಿನಾಂಕ 25.10.2002**ರಂದು ಹೊರಡಿಸಲಾದ **ಡಿಇ/46/ಪಿಎಸ್ಆರ್/2001**ನೇ ಸಂಖ್ಯೆಯ ಅಧಿಸೂಚನೆ.

2. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ವರ್ಗಾವಣೆ ವ್ಯವಸ್ಥೆ) (ತಿದ್ದುಪಡಿ) ನಿಯಮಗಳ ಅನುಸೂಚಿ –ಎ ಗೆ ತಿದ್ದುಪಡಿ ಮಾಡಿ **ದಿನಾಂಕ 02.12.2002**ರಂದು ಹೊರಡಿಸಲಾದ **ಡಿಇ/51/ಪಿಎಸ್ಆರ್/2001**ನೇ ಸಂಖ್ಯೆಯ ಅಧಿಸೂಚನೆ.

3. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕ.ವಿ.ಪ್ರ.ನಿ.ನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯ, ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) (ತಿದ್ದುಪಡಿ) ನಿಯಮಗಳ ನಿಯಮ 2 ಹಾಗೂ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 31.01.2003**ರಂದು ಹೊರಡಿಸಲಾದ **ಡಿಇ/14/ಪಿಎಸ್ಆರ್/2002**ನೇ ಸಂಖ್ಯೆಯ ಅಧಿಸೂಚನೆ.

4. 2001ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಾರ್ಷಿಕ ಲೆಕ್ಕ ವಿವರಣೆ) ನಿಯಮಗಳ ನಿಯಮ 5 ಹಾಗೂ ನಮೂನೆ 2ನ್ನು ಬದಲಾಯಿಸಿ **ದಿನಾಂಕ 04.02.2004**ರಂದು ಹೊರಡಿಸಲಾದ **ಡಿಇ/15/ಪಿಎಸ್‌ಆರ್/99/110** ಸಂಖ್ಯೆಯ ಅಧಿಸೂಚನೆ.

5. 2007ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರ ಹಾಗೂ ಸದಸ್ಯರುಗಳ ಪರಿಶ್ರಮ ಧನ, ಭತ್ಯೆ ಹಾಗೂ ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳ ನಿಯಮ 3 ಮತ್ತು 6ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 06.12.2007**ರಂದು ಹೊರಡಿಸಲಾದ **ಇಎನ್/137/ಪಿಎಸ್‌ಆರ್/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

2003ರ ವಿದ್ಯುಚ್ಛಕ್ತಿ (2003ರ ಕೇಂದ್ರ ಅಧಿನಿಯಮ 36) ಅಧಿನಿಯಮದ ಕಲಂ 182ರ ಮೇರೆಗೆ:

2003ರ ವಿದ್ಯುಚ್ಛಕ್ತಿ (ಮೇಲ್ಮನವಿ ಪ್ರಾಧಿಕಾರಗಳ) (ಕರ್ನಾಟಕ) ನಿಯಮಾವಳಿಗಳನ್ನು ರಚಿಸಿ **ದಿನಾಂಕ 30.12.2003**ರಂದು ಹೊರಡಿಸಲಾದ **ಡಿಇ/100/ಪಿಎಸ್‌ಆರ್/2003/1074**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

2001ರ ವಿದ್ಯುತ್ ಸಂರಕ್ಷಣಾ (2001ರ ಕೇಂದ್ರ ಕಾಯ್ದೆ 52) ಅಧಿನಿಯಮದ ಕಲಂ 59(2)ರ ಮೇರೆಗೆ:

1. 2001ರ ಕರ್ನಾಟಕ ವಿದ್ಯುತ್ ಸಂರಕ್ಷಣಾ ಅಧಿನಿಯಮವನ್ನು ನಿಯಂತ್ರಿಸಲು, ಜಾರಿಗೊಳಿಸಲು ಹಾಗೂ ಸಮನ್ವಯಗೊಳಿಸಲು ಕೆ.ಆರ್.ಇ.ಡಿ.ಎಲ್.ಗೆ ನೇಮಿಸಿ, **ದಿನಾಂಕ 13.05.2004**ರಂದು ಹೊರಡಿಸಲಾದ **ಡಿಇ/22/ಸಿಎಸ್‌ಆರ್/2002/363**ನೇ ಸಂಖ್ಯೆಯ ಅಧಿಸೂಚನೆ.

2. 2007ರ ಕರ್ನಾಟಕ ವಿದ್ಯುತ್ ಸಂರಕ್ಷಣಾ ನಿಧಿ ನಿಯಮಾವಳಿಗಳನ್ನು ರಚಿಸಿ **ದಿನಾಂಕ 01.09.2007**ರಂದು ಹೊರಡಿಸಲಾದ **ಇಎನ್/41/ಪಿಎಸ್‌ಆರ್/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) **(ಶ್ರೀ ಎಸ್.ಎ. ರವೀಂದ್ರನಾಥ್, (ಕೃಷಿ) ಸಚಿವರ ಪರವಾಗಿ:** ಮಾನ್ಯ ಅಧ್ಯಕ್ಷರೆ,